ಶ್ರೀ ಭಗವಾನ್ ಮಹಾವೀರ್ ಜೈನ್ ಸ್ವತಂತ್ರ ಪದವಿಪೂರ್ವ ಕಾಲೇಜು

# Mock Paper – 2017

## ಪ್ರಥಮ ಪಿ.ಯು.ಸಿ : ಕನ್ನಡ (01)

ಸಮಯ : 3 ಗಂಟೆ 15 ನಿಮಿಷ ಒಟ್ಟು ಅಂಕಗಳು : 100

### ಅ–ವಿಭಾಗ

**I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ :** **10 × 1 = 10**

1. ಹರಿಯು ಕರ್ಣನಿಂದ ಬೇಡಿದ್ದೇನು?
2. ಸತ್ಯವ ನುಡಿಯುವುದು ಯಾವುದರ ಶೃಂಗಾರವಾಗಬೇಕು?
3. ವಾಲ್ಮೀಕಿ ಏನನ್ನು ಹುಡುಕುತ್ತಾ ವನಕ್ಕೆ ಬಂದನು?
4. ಬೊಗಸೆಯಲ್ಲಿ ಯಾರನ್ನು ಬಂದಿಸಲು ಕವಿ ಬಯಸಿದ್ದಾನೆ?
5. ರಕ್ಷಾಕರಂಡಕವು ಯಾರ ಕೈಯಿಂದ ಕೆಳಗೆ ಬಿದ್ದಿತು?
6. ಶ್ರೀಮಂತ ರೈತರ ಉದಯಕ್ಕೆ ಯಾವುದು ಸಹಾಯಕವಾಯಿತು?
7. ವಿಪ್ರನು ಮರದಿಂದ ಎಲ್ಲಿಗೆ ಬಿದ್ದನು?
8. ಪಿಶಾಚಿಗಳು ಯಾರ ಹೆಸರು ಹೇಳಿದರೆ ಹೆದರುತ್ತವೆ?
9. ರಾಜಕುಮಾರಿಗೆ ಬಂದ ರೋಗ ಯಾವುದು?
10. ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು?

### ಆ–ವಿಭಾಗ

**II. (ಅ) ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :** **4 × 2 = 8**

11. ತಗಹು ಸೂತಕಗಳು ಯಾವುವು?
12. ಸಿಡಿಲು ಗುಡುಗುಗಳನ್ನು ಕಳುಹಿಸು ಎಂದು ಮಾದೇವ ಯಾರನ್ನು ಕೇಳುತ್ತಾನೆ.
13. ಬಾಂಬುಗಳಿಗೆ ನೆಲ ಏನಾಗಿದೆ?
14. ಹಾಸಿಗೆಯನ್ನು ಹೊಲಿದುಕೊಡುವಂತೆ ಅಮ್ಮಿಯನ್ನು ಕೇಳಲು ಕಾರಣವೇನು?
15. ಧನದಾಹದಿಂದ ಉಂಟಾದ ಪರಿಣಾಮಗಳೇನು?

**(ಆ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :** **3 × 2 = 6**

16. ಜ್ಯೋತಿಷ್ಯದ ಪ್ರಕಾರ ಗ್ರಹಗಳೆಷ್ಟು? ಅವು ಯಾವುವು?
17. ಮಾಸ್ತರು ಬಾಡಿಗೆ ಮನೆಯನ್ನು ಹೇಗೆ ಖರೀದಿಸಿದರು?
18. ಡಿ.ಸಿ.ಎಂ ಸಂಸ್ಥೆಗೆ ಯಾರು ಯಾರು ಭೇಟಿ ನೀಡಿದ್ದರು?
19. ಅಪರಾಜಿತ ಬಳ್ಳಿಯ ಗುಣ ಯಾವುದು?

**(ಇ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :** 3 × 2 = 6

20. ಸಾವ್ಕಾರಣ್ಣ ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ?
21. ಪಿಶಾಚಿಗಳು ಯಾವುದರಿಂದ ನಾಣ್ಯಗಳನ್ನು ಮತ್ತು ಸಿಪಾಯಿಗಳನ್ನು ಮಾಡಿಕೊಡುತ್ತವೆ?
22. ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?
23. ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ?

### ಇ–ವಿಭಾಗ

**III.(ಅ) ಕೆಳಗಿನ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯಗಳನ್ನು ಬರೆಯಿರಿ :** **2 × 3 = 6**

24. ನೀ ದೇವನಾದಡೆ ಎನ್ನನೇಕೆ ಸಲಹೆ.
25. ಸರಿಗಾತ್ರವಾಗಿ ಸಮನಿಸಲಿ ನಿನ್ನತನ.
26. ಹೂ ತರುವೆನೇ ನಿನ್ನ ಹೆಸರಿಗೆ.

**(ಆ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯಗಳನ್ನು ಬರೆಯಿರಿ :** **1 × 3 = 3**

27. ತುಟಿ ಬಣ್ಣ ಕೆಡದಂತೆ ಚಮಚೆಯನ್ನು ತಿನ್ನುವ ಚಲುವೆಯರು.
28. ರಸ್ತೆಯಿಂದ ಏಳುವಧೂಳು ನನ್ನ ತಲೆಗೆ ತಾಗಬೇಕು.

**(ಇ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯಗಳನ್ನು ಬರೆಯಿರಿ :** **1 × 3 = 3**

29. ಹೆಣ್ಣಿದ್ದ ಮನೆಯ ಸೌಭಾಗ್ಯವೇ ಬೇರೆ.
30. ಜನ ಎಲ್ಲಿ ಸೇರಿದರೆ ಅಲ್ಲೇ ದರ್ಬಾರು.

## ಈ–ವಿಭಾಗ

**IV. (ಅ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 3 × 4 = 12**

31. ಚೋಳರಾಜನು ಚನ್ನಯ್ಯನನ್ನು ಹುಡುಕಿದ ಬಗೆ ಹೇಗೆ?
32. ಕನಕದಾಸನು ತಲ್ಲಣಿಸದಿರು ಮನವೆ ಎನ್ನಲು ಕಾರಣವೇನು?
33. ಕರ್ನಾಟಕ ಎಂಬುದು ಬರೀ ಮಣ್ಣಿಗೆ ಹೆಸರಲ್ಲ ಎಂಬುದನ್ನು ಕವಿ ಹೇಗೆ ಹೇಳಿದ್ದಾರೆ?
34. ಒಡಲುಗಳ್ಳರು ನಾಡನ್ನು ಹೇಗೆ ಸುಲಿಗೆ ಮಾಡುತ್ತಿದ್ದಾರೆ?

**(ಆ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 2 × 4 = 8**

35. ಗಾಂಧಿ ಎಂಬ ಹುಡುಗನ ಸಾವಿನ ಸಂದರ್ಭವನ್ನು ವಿವರಿಸಿ.
36. ಮಾಯಾದೇವಿ ದೇವಾಲಯ ಪರಿಸರ ಹೇಗಿತ್ತು?
37. ಹುಲಿಯು ನಾಪಿತನಿಂದ ತಪ್ಪಿಸಿಕೊಂಡ ರೀತಿಯನ್ನು ನಿರೂಪಿಸಿ.

**(ಇ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 2 × 4 = 8**

38. ಬೋಳೇಶಂಕರನ ಅಣ್ಣಂದಿರೆ ವಾಸಿ ಎಂದು ಪಿಶಾಚಿ ಹೇಳಲು ಕಾರಣವೇನು?
39. ರಾಜಕುಮಾರಿ ಹೊಟ್ಟೆನೋವು ಪ್ರಸಂಗದಿಂದ ಬೋಳೇಶಂಕರ ರಾಜನಾದ ಕಥೆಯನ್ನು ತಿಳಿಸಿ.
40. ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ಬರೆಯಿರಿ.

## ಉ–ವಿಭಾಗ

**V. (ಅ) ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ : 1 × 5 = 5**

41. ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೊಳ್ಗೊಡೆಯುಂಟಯ್
ನೀನುಳ್ಳೊಡುಂಟು ಪೀಟಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ

ಅಥವಾ

42. ಎಲ್ಲೋ ದೂರದಲ್ಲಿ ಭೂಮಿ ಕಂಪಿಸಿದರೆ
ಕಡಲು ಎಲ್ಲೆ ಮೀರಿ ಮೊರೆದರೆ
ಇಟ್ಟಿಗೆ ಮೇಲೆ ಇಟ್ಟಿಗೆ ಜೋಡಿಸಿದ
ಗುಡಿ, ಚರ್ಚು, ಮಸೀದಿಗಳೆಲ್ಲಾ
ಹಾರಿ ಹೋಗುತ್ತವೆ ಸಾಕ್ಷಿಯಿಲ್ಲದಂತೆ
ಕುಸಿದು ಹೋದ ಸಮಾಧಿಯ ಸುತ್ತ
ನಾಳೆ ಉತ್ಖನನ ನಡೆಸುವವರು ಪಿಕಾಸಿ ಹಿಡಿದು
ಎಲ್ಲಿಂದ ಅಗೆಯಬೇಕೆಂಬ ನಕಾಶೆ ಹುಡುಕುತ್ತಾರೆ.

**(ಆ) ಭಾಷಾಭ್ಯಾಸ :**

**ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರು ಸೂಚನೆಗೆ ಅನುಗುಣವಾಗಿ ಉತ್ತರವನ್ನು ಬರೆಯಿರಿ : 6 × 2 = 12**

43. ಈ ಪದಗಳ ಅರ್ಥ ಬರೆಯಿರಿ : ಕೆರ್ಪು, ಪಾಟಿ
44. ಈ ಪದಗಳ ನಾನಾರ್ಥ ಬರೆಯಿರಿ : ಬಟ್ಟೆ, ಗುಡಿ
45. ಈ ಪದಗಳ ತದ್ಭವ ರೂಪ ಬರೆಯಿರಿ : ಸ್ನೇಹ, ಯುಗ
46. ಈ ಪದಗಳ ಗ್ರಾಂಥಿಕ ರೂಪ ತಿಳಿಸಿ : ಬತ್ರೀನಿ, ಒದ್ಕಂಡು
47. ಈ ಪದಗಳ ವಿರುದ್ಧ ರೂಪ ಬರೆಯಿರಿ : ಹಗಲು, ಶಾಂತಿ
48. ಬಿಡಿಸಿ ಬರೆಯಿರಿ : ಕಣ್ಮಲರ್, ಜಲಾಂಜಲಿ
49. ಪ'ಕಾರ ಹ'ಕಾರವಾದ ಎರಡು ಪದಗಳನ್ನು ಬರೆಯಿರಿ.

**(ಇ) ಕೆಳಗಿನ ಯಾವುದಾದರೂ ಒಂದು ವಿಷಯ ಕುರಿತು ಪ್ರಬಂಧವನ್ನು ಬರೆಯಿರಿ : 1 × 5 = 5**

50. ಮತದಾನ
51. ಏಕರೂಪ ಶಿಕ್ಷಣ

**(ಈ) ಪತ್ರಲೇಖನ : ಈ ಕೆಳಗಿನ ಯಾವುದಾದರೂ ಒಂದಕ್ಕೆ ಪತ್ರ ಬರೆಯಿರಿ : 1 × 4 = 4**

52. ನಿಮ್ಮ ಕಾಲೇಜಿನಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವ ಸಮಾರಂಭ ಕುರಿತು ನಿಮ್ಮ ತಂದೆ / ತಾಯಿ ಅವರಿಗೆ ಪತ್ರ ಬರೆಯಿರಿ.

53. ನಿಮ್ಮ ಊರಿನ ಗ್ರಂಥಾಲಯದ ಕುಂದು ಕೊರತೆ ಕುರಿತು ಜಿಲ್ಲಾ ಗ್ರಂಥಾಧಿಕಾರಿಗಳಿಗೆ ಪತ್ರ ಬರೆಯಿರಿ.

**(ಉ) ಈ ಕೆಳಗಿನ ಯಾವುದಾದರೂ ಒಂದಕ್ಕೆ ಗಾದೆಯನ್ನು ವಿಸ್ತರಿಸಿ ಬರೆಯಿರಿ :** **$1 \times 4 = 4$**

54. ಆಕಳು ಕಪ್ಪಾದರೆ ಹಾಲು ಕಪ್ಪೆ

55. ತಾಳಿದವನು ಬಾಳಿಯಾನು